**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ 36/2025**

| | | | |
|---|---|---|---|
| ಸಾಕ್ಷಿದಾರರ ಹೆಸರು | | ವನರಾಜು | ಪ್ರಮಾಣ ಮಾಡಿದ ದಿನಾಂಕಃ 22.06.2026 |
| ತಂದೆ ಹೆಸರು | | ಚನ್ನವೀರೇಗೌಡ | |
| ವಯಸ್ಸು | | 51 ವರ್ಷ | |
| ವೃತ್ತಿ | | ಸಿಪಿಐ | ಚಾಸಾ: 22 |
| ವಾಸಸ್ಥಳ | | ಸಕಲೇಶಪುರ ಟೌನ್ | ಫ್ರಾಸಾ: 08 |

**ದಿನಾಂಕಃ** 22.06.2026 **ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ**

ದಿಃ 03.08.2023 ರಿಂದ 16.10.2025 ರವರೆಗೆ ಬೇಗೂರು ಪೊಲೀಸ್ ಠಾಣೆಯಲ್ಲಿ ಸಿಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 03.10.2024 ರಂದು ಚಾಸಾ–21 ರವರಿಂದ ಕಡತ ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ಚಾಸಾ–7 ರಿಂದ 9 ರವರನ್ನು ಠಾಣೆಗೆ ಹಾಜರು ಮಾಡಿಕೊಂಡು ಅಪೋಲೋ ಆಸ್ಪತ್ರೆಯ ಶವಗಾರದಲ್ಲಿ ಮೃತ ವ್ಯಕ್ತಿ ಎಸ್.ಎಲ್. ಮಹದೇವಸ್ವಾಮಿಯವರ ಶವತನಿಖೆಯನ್ನು ಬೆಳಿಗ್ಗೆ 8.00 ರಿಂದ 10.00 ರವರೆಗೆ ನಡೆಸಿರುತ್ತೇನೆ. ಅದೇ ದಿನ ಚಾಸಾ–1, 2 ಮತ್ತು 5 ರವರನ್ನು ಪಂಚರನ್ನಾಗಿ ಮಾಡಿಕೊಂಡು ಕೃತ್ಯ ನಡೆದ ಸ್ಥಳ ಮಹಜರ್ ನ್ನು ಮಧ್ಯಾಹ್ನ 2.00 ರಿಂದ 2.45 ರವರೆಗೆ ನಡೆಸಿ, ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇನೆ. ಅದೇ ದಿನ ಚಾಸಾ–2, 4 ಮತ್ತು 6 ರವರನ್ನು ಪಂಚರಾಗಿ ನೇಮಿಸಿಕೊಂಡು ಅಪಘಾತವಾಗಿದ್ದ ಕೆಎ–10–ಆರ್–3293 ಮೋಟರ್ ಸೈಕಲ್ ಮತ್ತು ಟಿಎನ್–77–ಇ–0936 ಕಾರಿನ ಅಮಾನತ್ತು ಮಹಜರ್ ನ್ನು ಸಂಜೆ 4.45 ರಿಂದ 5.30 ರವರೆಗೆ ಠಾಣಾ ಆವರಣದಲ್ಲಿ ನಡೆಸಿರುತ್ತೇನೆ. ನಂತರ ಅದನ್ನು ಠಾಣಾ ಪಿಎಫ್ ಸಂಖ್ಯೆ 157/2024 ರಲ್ಲಿ ಸೇರಿಸಿ ನ್ಯಾಯಾಲಯಕ್ಕೆ ನಿವೇಧಿಸಿಕೊಂಡಿರುತ್ತೇನೆ.

ಅದೇ ದಿನ ಚಾಸಾ–14 ರವರಿಂದ ಶವ ತನಿಖಾ ಮತ್ತು ಸ್ಥಳ ಮತ್ತು ಅಮಾನತ್ತು ಮಹಜರ್ ಕಾಲಕ್ಕೆ ತೆಗೆದ ಫೋಟೋ ಮತ್ತು ವಿಡೀಯೋಗಳನ್ನು ನೀಡಿದ ಮೇರೆಗೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ.63(4)(ಸಿ) ರಡಿ ಪ್ರಮಾಣ ಪತ್ರ ಪಡೆದಿರುತ್ತೇನೆ. ಅದೇ ದಿನ ಚಾಸಾ–2, 3, 19 ಮತ್ತು 20 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 05.10.2024 ರಂದು ಟಿಎನ್–77–ಇ–0936 ಮಾಲೀಕರಿಗೆ ನೋಟೀಸ್ ನೀಡಿ ಉತ್ತರ ಪಡೆದಿರುತ್ತೇನೆ ಮತ್ತು ದಾಖಲೆಗಳನ್ನು ಹಾಜರುಪಡಿಸಿದ್ದು, ಸೂಕ್ತ ಬಾಂಡ್ ಪಡೆದು ವಾಹನ ಬಿಡುಗಡೆ ಮಾಡಿರುತ್ತೇನೆ. ದಿಃ 11.10.2024 ರಂದು ಕೆಎ–10–ಆರ್–3293 ಮತ್ತು ಟಿಎನ್–77–ಇ–0936 ವಾಹನಗಳ ಐಎಂವಿ ವರದಿಯನ್ನು ಪಡೆದಿರುತ್ತೇನೆ. ದಿಃ 14.10.2024 ರಂದು ಚಾಸಾ–14 ರವರಿಂದ ವಾಹನ ಬಿಡುಗಡೆ ಕಾಲಕ್ಕೆ ತೆಗೆದ ಫೋಟೋಗಳ ಬಗ್ಗೆ ಕಲಂ.63(4)(ಸಿ) ರೀತ್ಯಾ ಪ್ರಮಾಣ ಪತ್ರ ಪಡೆದಿರುತ್ತೇನೆ. ದಿಃ 15.10.2024 ರಂದು ಶವತನಿಖಾ ಕಾಲದಲ್ಲಿ ಸಂಗ್ರಹಿಸಿದ ವಿಸಾರವನ್ನು ಠಾಣಾ ಸಿಬ್ಬಂದಿ ಬಂದು ಹಾಜರಿಸಿದ್ದು ಅದನ್ನು ಠಾಣಾ ಪಿಎಫ್ ಸಂಖ್ಯೆ 158/2024 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿಃ 19.10.2024 ರಂದು ವಿಸಾರವನ್ನು ಆರ್.ಎಫ್.ಎಸ್.ಎಲ್ ಗೆ ಕಳುಹಿಸಿರುತ್ತೇನೆ. ದಿಃ 26.10.2024 ರಂದು ಕೆಎ–10–ಆರ್–3293 ಬೈಕ್ ನ್ನು ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತೇನೆ. ದಿಃ 05.12.2024 ರಂದು ಮೃತ ಮೃತನ ಪಿಎಂ ವರದಿಯನ್ನು ಪಡೆದುಕೊಂಡಿರುತ್ತೇನೆ. ತನಿಖೆ ಮುಕ್ತಾಯವಾದ್ದರಿಂದ ಆರೋಪಿ ಮೇಲೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿ ಮತ್ತು ವಾಹನಗಳನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿ ಗೈರು ಹಾಜರಿದ್ದು, ಆತನ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ನುಡಿಯುತ್ತಾರೆ.

ಸಾಕ್ಷಿಯು ಶವಶನಿಖಾ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ19 ಎಂದು, ಸಾಕ್ಷಿಯ ಸಹಿಯನ್ನು ನಿಪಿ19(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯು ನಿಪಿ19 ರ ಕಾಲಕ್ಕೆ ತೆಗೆದ ನಾಲ್ಕು ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ20 ರಿಂದ 23 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ2 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಘಟನಾ ಸ್ಥಳದ ನಕ್ಷೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ24 ಎಂದು, ಸಾಕ್ಷಿಯ ಸಹಿಯನ್ನು ನಿಪಿ24(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯು ನಿಪಿ4 ಮತ್ತು 5 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ3 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ3(ಸಿ) ಎಂದು ಗುರುತಿಸಲಾಯಿತು.

ಆ ಕಾಲಕ್ಕೆ ತೆಗೆದ ನಿಪಿ6 ರಿಂದ 8 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ14 ರಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ14(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ15 ರಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ15(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ16 ರಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ16(ಬಿ) ಎಂದು ಗುರುತಿಸಲಾಯಿತು. ಚಾಸಾ–13 ರವರಿಂದ ಇಂಡೆಮ್ನಿಟಿ ಬಾಂಡ್ ಪಡೆದು ವಾಹನ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಯು ನಿಪಿ9 ರಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ9(ಬಿ) ಎಂದು ಗುರುತಿಸಲಾಯಿತು. ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ.63(4)(ಸಿ) ರಡಿ ಪಡೆದ ನಾಲ್ಕು ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ26 ರಿಂದ ನಿಪಿ29 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು ನಿಪಿ26(ಎ) ರಿಂದ ನಿಪಿ29(ಎ) ಎಂದು ಗುರ್ತಿಸಲಾಯಿತು.

ಚಾಸಾ–12 ರವರಿಗೆ ನೀಡಲಾದ ಕಲಂ.133 ಐಎಂವಿ ಆಕ್ಟ್ ನೋಟೀಸ್ ನ್ನು ನಿಪಿ25 ಎಂದು ಗುರುತಿಸಲಾಯಿತು. ಸಾಕ್ಷಿಯು ಐಎಂವಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ30 ಎಂದು, ಸಾಕ್ಷಿಯ ಸಹಿಯನ್ನು ನಿಪಿ30(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯು ಪಿಎಂ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ31 ಎಂದು, ಸಾಕ್ಷಿಯ ಸಹಿಯನ್ನು ನಿಪಿ31(ಎ) ಎಂದು ಗುರ್ತಿಸಲಾಯಿತು. ಆರೋಪಿಯನ್ನು ಮತ್ತು ವಾಹನಗಳನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿ ಗೈರು ಹಾಜರಿದ್ದು, ಆತನ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ನುಡಿಯುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದಃ**

ಸ್ಥಳ ಮಹಜರ್ ಕಾಲಕ್ಕೆ ಪಂಚರಿಗೆ ನೋಟೀಸ್ ನೀಡಿದ್ದೆ. ಸ್ಥಳ ಮಹಜರ್ ನ್ನು ಠಾಣೆಯಲ್ಲೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಕಚ್ಚಾ ನಕ್ಷೆಯನ್ನು ನಮ್ಮ ಸಿಬ್ಬಂದಿ ತಯಾರಿಸಿರುತ್ತಾರೆ. ಅದನ್ನು ತಯಾರು ಮಾಡಿದವರ ಸಹಿ ಅದರಲ್ಲಿ ಇಲ್ಲ ಎಂದರೆ ಸರಿ. ಸದರಿ ನಕ್ಷೆಯನ್ನು ಠಾಣೆಯಲ್ಲೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಪೆಟ್ರೋಲ್ ಬಂಕ್ ನಿಂದ ಅಗತಗೌಡನಹಳ್ಳಿ ಗೇಟ್ ಗೆ ಸುಮಾರು 300 ಮೀಟರ್ ಇದೆ. ಸದರಿ ನಕ್ಷೆಯನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಅಮಾನತ್ತು ಮಹಜರ್ ನ್ನು

ಪ್ರಕರಣಕ್ಕೆ ಅನುಕೂಲವಾಗುವಂತೆ ಬರೆದಿದ್ದೇನೆ ಎಂದರೆ ಸರಿಯಲ್ಲ. ಶವ ತನಿಖಾ ವರದಿಯನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಪಿಎಂ ವರದಿಯನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಫೋಟೋಗಳನ್ನು ಈ ಪ್ರಕರಣಕ್ಕಾಗಿ ನಾನೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ